ಆಟದ ಮೂಲಕ ಕಲಿಯುವುದು ಹೇಗೆಂದು ಮಕ್ಕಳು ಕಲಿಯುತ್ತಾರೆ

ದಿವ್ಯಾ ಬಿ. ಎ.

ಸೋಮವಾರದಂದು ನನ್ನ ತರಗತಿಗೆ ಬಂದ ಸಹನಾ* ತನ್ನ ಗೆಳತಿಯರೊಂದಿಗೆ ಮಾತುಕತೆಗೆ ಇಳಿದಳು. ತನ್ನ ಸಹಪಾಠಿಗಳೊಂದಿಗೆ ಹೊಸ ಆಟವೊಂದನ್ನು ಆಡಲು ಆಕೆ ಉತ್ಸುಕಳಾಗಿದ್ದಳು. ವಾರಾಂತ್ಯದಲ್ಲಿ ಆಕೆಯ ಅಚ್ಚುಮೆಚ್ಚಿನ ರೆಸ್ಟೋರೆಂಟ್ ಒಂದಕ್ಕೆ ಭೇಟಿ ನೀಡಿದ ನಂತರ ಆಕೆಯ ತಲೆಗೆ ಒಂದು ವಿಚಾರ ಹೊಳೆದಿತ್ತು. ಸಹನಾ ತನ್ನ ಯೋಜನೆಯನ್ನು ಆಕೆಯ ಸಹಪಾಠಿಗಳಿಗೆ ವಿವರಿಸಿದಳು ಹಾಗೂ ಎಲ್ಲರೂ ರೆಸ್ಟೋರೆಂಟ್ ಒಂದನ್ನು ನಿರ್ಮಿಸಲು ಬೇಕಾಗುವ ವಸ್ತುಗಳಿಗಾಗಿ ಹುಡುಕಾಟ ಆರಂಭಿಸಿದರು. ಮರದ ದಿಮ್ಮಿಗಳು ಕುರ್ಚಿಗಳಾದವು, ಹಲಗೆಗಳು ಮೇಜುಗಳಾದವು, ನಮ್ಮ ಆಟದ ಅಡುಗೆ ಕೋಣೆಯು ರೆಸ್ಟೋರೆಂಟ್‌ನ ಕಾರ್ಯಸ್ಥಳವೆನಿಸಿತು ಹಾಗೂ ಪುಟಾಣಿ ಅಡುಗೆಯವಳು ತನ್ನ ದುಪ್ಪಟ್ಟಾ ಬಳಸಿ ಟೋಪಿಯನ್ನು ತಯಾರಿಸಿದಳು. ಅಡುಗೆಯವಳು ಅತಿಥಿಗಳಿಗೆ ಏನು ಬೇಕೆಂದು ಕೇಳಿದಳು. ಸ್ಪಘೆಟ್ಟಿ (ಪಾಸ್ತಾದಂತಹ ಒಂದು ಬಗೆಯ ತಿಂಡಿ)ಯನ್ನು ಆರ್ಡರ್ ಮಾಡಲಾಯಿತು ಹಾಗೂ ಸಣ್ಣ ಮಗುವಿಗೆ (ಒಂದು ಗೊಂಬೆ) ಒಂದು ಪ್ಲೇಟ್ ಇಡ್ಲಿಯನ್ನು ಆರ್ಡರ್ ಮಾಡಲಾಯಿತು. ಅಡುಗೆಯವಳಾದ ಪುಟಾಣಿಯು ಕಿಲಕಿಲನೆ ನಕ್ಕಳು ಹಾಗೂ ಪೆಸ್ಟೊ ಸ್ಪಘೆಟಿಯನ್ನು ಮಾಡಲು ಒಂದಷ್ಟು ವರ್ಣಮಯ ನೂಲನ್ನು ಬಳಸಿದಳು. ಜೊತೆಗೆ ಮರದ ತಟ್ಟೆ ಮಣೆಗಳು ಪೋಸ್ಟರ್ ಬೇಯಿಸಿದ ಇಡ್ಲಿಗಳಾದವು. ಮಕ್ಕಳು ಆಟವನ್ನು ಆಡುವಾಗ ನಿಜಕ್ಕೂ ಮೋಜನ್ನು ಅನುಭವಿಸಿದರು; ಅಲ್ಲದೆ ಅವರ ಪಾಲಿಗೆ ಇದೊಂದು ಅದ್ಭುತ ಕಲಿಕೆಯ ಅನುಭವವಾಗಿತ್ತು.



ಆಟದ ಪ್ರಾಮುಖ್ಯತೆ

ಬೇಗನೆ ಬೌದ್ಧಿಕತೆ ಹೊಂದಿರುವುದು (early intellectualisation) ಅಥವಾ ಶೈಕ್ಷಣಿಕ ಕಾರ್ಯದ ಮೇಲೆ ಗಮನ ನೀಡುವ ಕಾರಣ ಸೃಜನಶೀಲ, ಮುಕ್ತ, ಕಲ್ಪನಾಶೀಲ ಮಕ್ಕಳ ಆಟಕ್ಕೆ ಗಂಭೀರವಾದ ಅಪಾಯ ಉಂಟಾಗಿದೆ. ಶೈಕ್ಷಣಿಕ ಚಟುವಟಿಕೆಗಳು ಮತ್ತು ಸಾಂಪ್ರದಾಯಿಕ ತರಗತಿ ಕೋಣೆಯಲ್ಲಿ ಉರು ಹೊಡೆದು ಕಲಿಯುವ ವಿಧಾನದಿಂದಾಗಿ ಮಕ್ಕಳ ಮೇಲೆ ಅಧಿಕ ಭಾರ ಹೊರಿಸಲಾಗಿದೆ. ಅವರನ್ನು ತರಗತಿ ಕೋಣೆಯ ಪರಿಸರಕ್ಕೆ ಬಂಧಿಸಿ ಓದಲು, ಬರೆಯಲು ಮತ್ತು ಅವರು ಸಿದ್ಧರಿಲ್ಲದ ಮತ್ತು ಅವರ ವಯಸ್ಸಿಗೆ ಸೂಕ್ತವಲ್ಲದ ಚಟುವಟಿಕೆಗಳಲ್ಲಿ ತೊಡಗಲು ಒತ್ತಡ ಹೇರಲಾಗುತ್ತಿದೆ. ಇದರಿಂದ ಅವರು ಹತಾಶೆಗೆ ಒಳಗಾಗುತ್ತಾರೆ, ದಣಿಯುತ್ತಾರೆ ಹಾಗೂ ನಿರಾಸಕ್ತಿ ತೋರುತ್ತಾರೆ. ಕೆಲವೊಮ್ಮೆ ಇದು ಅವರ ಸಾಮರ್ಥ್ಯವನ್ನು ತಡೆಹಿಡಿದು ಭಾವನೆಗಳ ಸ್ಫೋಟದಲ್ಲಿ ಪರ್ಯವಸಾನಗೊಳ್ಳಬಹುದು. ಕೆಲವೊಮ್ಮೆ ಇವರನ್ನು 'ಅತಿಯಾಗಿ ಸಕ್ರಿಯ' (Hyper Active) ಅಥವಾ 'ಗಮನದ ಕೊರತೆ' (Attention Deficit) ಇರುವವರು ಎಂದು ಬಣ್ಣಿಸಬಹುದು. ಇನ್ನೊಂದೆಡೆ, ಆಟದ ಮೂಲಕ ಕಲಿಯುವ ಮತ್ತು ರಾಚನಿಕವಲ್ಲದ ಆಟದ ವಸ್ತುಗಳನ್ನು ಬಳಸುವ ಮಕ್ಕಳು ಸಾಕಷ್ಟು ಸೃಜನಶೀಲ ವಿಚಾರಗಳನ್ನು ವ್ಯಕ್ತಪಡಿಸುತ್ತಾರೆ. ಅದೇ ಮುಕ್ತ, ಎಲ್ಲೆ ಇರದ ವಸ್ತುವಿನೊಂದಿಗೆ ಎಷ್ಟು ಬಾರಿ ಆಡಿದರೂ ಅವರಿಗೆ ಬೇಸರವೆಸುವುದಿಲ್ಲ ಹಾಗೂ ತಮ್ಮ ಜಾಣ್ಮೆ ಮತ್ತು ಸ್ವಂತಿಕೆಯನ್ನು ವ್ಯಕ್ತಪಡಿಸುವುದಕ್ಕಾಗಿ ಅವುಗಳನ್ನು ವಿವಿಧ ರೀತಿಯಲ್ಲಿ ಬಳಸಬಲ್ಲರು. ಅವರು ಆಟವಾಡದೆ ಇರುವಾಗಲೂ ನಿರಾಳವಾಗಿರುತ್ತಾರೆ ಹಾಗೂ ನಿಶ್ಚಲವಾಗಿರು-ವಾಗಲೂ ಪ್ರಶಾಂತತೆ ಹಾಗೂ ತೃಪ್ತ ಭಾವದಿಂದ ಇರುತ್ತಾರೆ. ಅವರು ಸ್ವಯಂ ತೊಡಗಿಸಿಕೊಂಡ, ಸ್ವಯಂ ಪ್ರೇರೇಪಿತ, ಆತ್ಮವಿಶ್ವಾಸದ, ಸೃಜನಶೀಲ, ಶಾಂತ ಚಿತ್ತದ, ಅಭಿವ್ಯಕ್ತಿಸುವ ಮತ್ತು ಉತ್ತಮ ಗಮನ ನೀಡುವ ಮಕ್ಕಳೆನಿಸುತ್ತಾರೆ.

ಪೂರ್ವ ಪ್ರಾಥಮಿಕ ಶಾಲೆಯ ಮಕ್ಕಳಿಗೆ ನಟನೆಯ ಆಟವು ಹೇಗೆ ಕಲಿಕೆಯ ಪ್ರಮುಖ ಮಾಧ್ಯಮವೆನಿಸುತ್ತದೆಯೋ, ಹಾಗೆಯೇ ಪ್ರಾಥಮಿಕ ಶಾಲಾ ಮಗುವಿಗೆ (6–11 ವರ್ಷಗಳು) ಕಲ್ಪನಾ ಶಕ್ತಿಯು ಪ್ರಮುಖ ಕಲಿಕಾ ಮಾಧ್ಯಮವೆನಿಸುತ್ತದೆ. ಕಲ್ಪನಾ ಶಕ್ತಿ ಮತ್ತು ಕಥೆ ಹೇಳುವ ಕಲೆಯ ಮೂಲಕ ಯಾವುದೇ ವಿಷಯವನ್ನು ಕಲಿಸಬಹುದು ಮತ್ತು ಕಿಂಟರ್‌ಗಾರ್ಟನ್ (2–6 ವರ್ಷಗಳು) ಮಕ್ಕಳು ಕಲಿಕೆಯಲ್ಲಿ ತಲ್ಲೀನರಾಗುತ್ತಾರೆ. ಕಲ್ಪನಾ ಶಕ್ತಿ ಇಲ್ಲದೆ ಕಲಿಕೆಯು ಅನುಭವಜನ್ಯವಾಗುವುದಿಲ್ಲ ಮತ್ತು ಅಂತರ್ಗತ-ಗೊಳ್ಳುವುದಿಲ್ಲ. ಒಂದನೇ ತರಗತಿಗೆ ಹೋಗುವ ಮೊದಲು ಕಿಂಡರ್‌ಗಾರ್ಟನ್ ದಿನಗಳಲ್ಲಿ ಮಕ್ಕಳ ಕಲ್ಪನಾಶಕ್ತಿಯನ್ನು ಪೋಷಿಸಲು ಮಗುವಿಗೆ ನಟನೆಯ ಆಟದಲ್ಲಿ ತೊಡಗಲು ಅವಕಾಶ ನೀಡಿದರೆ ಅದು ಕಲಿಯಲು ತಯಾರಾಗುತ್ತದೆ. ಬೇರೆ ಬೇರೆ ಮಕ್ಕಳಲ್ಲಿ ಕಲಿಕೆಗೆ ಸಂಬಂಧಿಸಿದ ಪ್ರತ್ಯೇಕ ಸಮಸ್ಯೆಗಳಿದ್ದರೂ, ಕಲಿಕೆಯನ್ನು ಮುಂದುವರಿಸಲು ಇರುವ ಸಮಸ್ಯೆಗಳನ್ನು ಮೀರಲು ಅವರಲ್ಲಿ ಕಂಡುಬರುವ ಉತ್ಸಾಹವು ಅದ್ಭುತವಾದುದು.

ಮಕ್ಕಳ ಆರೋಗ್ಯಯುತ ಬೆಳವಣಿಗೆಯಲ್ಲಿ ಸೃಜನಾತ್ಮಕ ಆಟದ ಪ್ರಾಮುಖ್ಯತೆಯನ್ನು ದಶಕಗಳ ಸಂಶೋಧನೆಗಳೂ ಬೆಂಬಲಿಸಿವೆ. ಜರ್ಮನಿಯಲ್ಲಿ 1970ರಲ್ಲಿ, ಅನೇಕ ಕಿಂಡರ್‌ಗಾರ್ಟನ್‌ಗಳನ್ನು ಆಟ ಆಧಾರಿತ ಪರಿಸರದಿಂದ ಶೈಕ್ಷಣಿಕ ಪರಿಸರಕ್ಕೆ ಮಾರ್ಪಡಿಸಿದ ಸಂದರ್ಭಗಳಲ್ಲಿ ಅಧ್ಯಯನವೊಂದನ್ನು ನಡೆಸಲಾಯಿತು. ಈ ಅಧ್ಯಯನವು 50 ಕಿಂಡರ್‌ಗಾರ್ಟನ್‌ಗಳ ಎರಡು ಗುಂಪುಗಳನ್ನು ಹೋಲಿಸಿತು. ಒಂದು ಗುಂಪಿನಲ್ಲಿ ಹೆಚ್ಚು ಆಟವಾಡುವ ಮಕ್ಕಳು

ಇದ್ದರೆ ಇನ್ನೊಂದು ಗುಂಪು ನಿಯಂತ್ರಣ ಗುಂಪು ಆಗಿದ್ದು, ಇದರಲ್ಲಿ ಮಕ್ಕಳು ಆರಂಭಿಕ ಶಿಕ್ಷಣದತ್ತ ಗಮನ ನೀಡುತ್ತಿದ್ದರು. ಮಕ್ಕಳನ್ನು ನಾಲ್ಕನೇ ತರಗತಿಯ ತನಕ ಗಮನಿಸಿ ಅಧ್ಯಯನ ನಡೆಸಲಾಯಿತು. ಸಾಂಪ್ರದಾಯಿಕ ಶಾಲೆಗಳ ಸಹಪಾಠಿಗಳಿಗೆ ಹೋಲಿಸಿದರೆ, ಆಟ ಆಧಾರಿತ ಕಿಂಡರ್‌ಗಾರ್ಟನ್‌ಗಳ ಮಕ್ಕಳು ದೈಹಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಬೌದ್ಧಿಕ ಅಭಿವೃದ್ಧಿ – ಹೀಗೆ ಮಾಪನ ಮಾಡಿದ ಪ್ರತಿ ಕ್ಷೇತ್ರದಲ್ಲಿಯೂ ಉತ್ಕೃಷ್ಟತೆ ಸಾಧಿಸಿದ್ದರು. ವಿಶೇಷವಾಗಿ ಕಡಿಮೆ ಆದಾಯದ ಮಕ್ಕಳಲ್ಲಿ ಫಲಿತಾಂಶವು ಗಮನಾರ್ಹವಾಗಿತ್ತು. ಅವರು ಆಟ ಆಧಾರಿತ ವಿಧಾನದಲ್ಲಿ ವಿಶೇಷ ಪ್ರಯೋಜನಗಳಿಸಿದ್ದರು. ಒಟ್ಟಾರೆ ಫಲಿತಾಂಶವು ಎಷ್ಟು ಗಮನಾರ್ಹವಾಗಿತ್ತು ಎಂದರೆ ಜರ್ಮನಿಯು ತನ್ನ ಎಲ್ಲಾ ಕಿಂಡರ್‌ಗಾರ್ಟನ್‌ಗಳನ್ನು ಆಟ ಆಧಾರಿತ ಕಲಿಕೆಗೆ ಪರಿವರ್ತಿಸಿತು.[i] ಇತ್ತೀಚಿನ ದಿನಗಳಲ್ಲಿ ಪರ್ಯಾಯ ಶಿಕ್ಷಣ ವ್ಯವಸ್ಥೆಯಲ್ಲಿ ಜನಪ್ರಿಯತೆ ಪಡೆದಿರುವ ಫಿನ್ಲೆಂಡಿನ ಶಾಲೆಗಳಂತೆಯೇ ಜರ್ಮನಿಯ ಶಾಲೆಗಳು ಸಹ ಈ ವಿಧಾನವನ್ನು ಇತ್ತೀಚಿನ ತನಕ ಮುಂದುವರಿಸಿವೆ.

ವಾಲ್ಡೊರ್ಫ್ ವಿಧಾನ

ವಾಲ್ಡೊರ್ಫ್ ವಿಧಾನವು ಸ್ವತಂತ್ರ ಶಾಲಾ ಚಳವಳಿಯಾಗಿದ್ದು ಇದನ್ನು ಯೂರೋಪಿನಲ್ಲಿ ನೂರು ವರ್ಷಗಳ ಹಿಂದೆ ಆಸ್ಟ್ರಿಯಾದ ತತ್ವಶಾಸ್ತ್ರಜ್ಞ ಮತ್ತು ದಾರ್ಶನಿಕ ರುಡೋಲ್ಫ್ ಸ್ಟೈನರ್ ಅಭಿವೃದ್ಧಿಪಡಿಸಿದರು. ಕಲಿಕಾ ಪ್ರಕ್ರಿಯೆಯು ಮೂಲಭೂತವಾಗಿ ಮೂರು ಹಂತಗಳಲ್ಲಿತ್ತು ಮತ್ತು ಆಲೋಚನೆ, ಭಾವನೆ ಮತ್ತು ಕ್ರಿಯೆಯಲ್ಲಿ ತೊಡಗಿಸಿ-ಕೊಂಡಿತು. ಪ್ರತಿ ಮಗುವನ್ನು ಶೈಕ್ಷಣಿಕ, ಕಲೆ ಮತ್ತು ಪ್ರಾಯೋಗಿಕ ಕೌಶಲಗಳನ್ನು ಸಂಯೋಜಿಸುವ ವಿಧಾನದ ಮೂಲಕ ಕೊಂಡೊಯ್ಯಲಾಯಿತು.[ii] ವಾಲ್ಡೊರ್ಫ್ ಶಿಕ್ಷಣ ಶಾಸ್ತ್ರವು, ಆರಂಭಿಕ ವರ್ಷಗಳಲ್ಲಿ ಆಟವನ್ನು ಕಲಿಕೆಯ ಒಂದು ರೂಪವಾಗಿ ಪರಿಗಣಿಸುವ ಮೂಲಕ ಬಾಲ್ಯವನ್ನು ರಕ್ಷಿಸಲು ಸಹಕರಿಸುತ್ತದೆ.

ನಮ್ಮ ತುಳಸಿ ವಾಲ್ಡೊರ್ಫ್ ಕಿಂಡರ್‌ಗಾರ್ಟನ್‌ನಲ್ಲಿ, ನಾವು ಸ್ಥಳವನ್ನು ಮನೆಯ ವಾತಾವರಣದ ಮುಂದುವರಿದ ಭಾಗವಾಗಿ ವಿನ್ಯಾಸಗೊಳಿಸಿದ್ದೇವೆ ಮತ್ತು ಮಗು ಮನೆಯಲ್ಲಿ ಅನುಭವಿಸ-ಬಹುದಾದ ಚಟುವಟಿಕೆಗಳನ್ನು ಇದು ಒಳಗೊಂಡಿದೆ. ಇಲ್ಲಿ ಮಕ್ಕಳು ಪ್ರತಿ ನಿತ್ಯದ ವಸ್ತುಗಳಾದ ಆಟದ ಅಡುಗೆ ಕೋಣೆ, ಕೈಯಿಂದ ಮಾಡಿದ ಆಟಿಕೆಗಳು, ಸಣ್ಣಸಣ್ಣ ಕಲ್ಲುಗಳು, ಮರದ ತುಂಡುಗಳು, ದುಪ್ಪಟ್ಟಾ, ಶಾಲು, ಬುಟ್ಟಿ, ಡೇರೆಗಳು ಹಾಗೂ ಮುಕ್ತ, ಎಲ್ಲೆ ಇರದ ಇತರ ಆಟದ ಸಾಮಗ್ರಿಗಳೊಂದಿಗೆ ತೊಡಗಿಸಿಕೊಳ್ಳುತ್ತಾರೆ. ಈ ಆಟಿಕೆಗಳೊಂದಿಗೆ ಆಟವಾಡಿ ಮಕ್ಕಳು ಯಾವುದೇ ನಿರ್ದಿಷ್ಟ ಗುರಿಯನ್ನು ಈಡೇರಿಸುವ ಅಗತ್ಯವಿಲ್ಲ. ಔಪಚಾರಿಕ ಕಲಿಕೆಗೆ ಯಾವುದೇ ಒತ್ತು ನೀಡದೆ ಊಟ-ಆಟ-ನಿದ್ರೆ-ಪುನರಾವರ್ತನೆ ಮಾದರಿಗೆ ಗಮನ ನೀಡಲಾಗುತ್ತದೆ. ಇಂತಹ ವಿಧಾನದ ಮೂಲಕ ಸಾಧಿಸುವ ಕಲಿಕೆಯು ಅಗಾಧವಾದುದು.



ಚಿತ್ರ ಶೀರ್ಷಿಕೆ: ಮರದ ತುಂಡುಗಳೊಂದಿಗೆ ಆಟವಾಡುವುದು

ವಿವಿಧ ವಯಸ್ಸುಗಳಲ್ಲಿ ಆಟದ ಪರಿಣಾಮ

ಈ ಕುರಿತು ಸ್ಪಷ್ಟ ಚಿತ್ರಣ ನೀಡಬೇಕಾದರೆ ಆಟವು 2 ರಿಂದ 6 ವರ್ಷಗಳ ತನಕ ಹೇಗೆ ಮುಂದುವರಿಯುತ್ತದೆ ಎಂಬುದನ್ನು ನೋಡೋಣ. ಜಗತ್ತಿನಾದ್ಯಂತ ಮಕ್ಕಳು ತಮ್ಮ ವಿಭಿನ್ನ ಸಂಸ್ಕೃತಿ ಮತ್ತು ಭಾಷೆಯ ಹೊರತಾಗಿಯೂ ಒಂದೇ ರೀತಿಯಲ್ಲಿ ಆಟ ಆಡುತ್ತಾರೆ. ಅವರು ಆಟದ ಸಾಮಾನ್ಯ ಭಾಷೆಯನ್ನು ಮಾತನಾಡುತ್ತಾರೆ.

ಎರಡರಿಂದ ಮೂರು ವರ್ಷದ ಮಕ್ಕಳು: ಸಮಾನಾಂತರ ಆಟ ಮತ್ತು ಕಲ್ಪನೆ

ಎರಡರಿಂದ ಮೂರು ವರ್ಷಗಳ ವಯಸ್ಸಿನ ನಡುವೆ ಹತ್ತುವುದು, ನೆಗೆಯುವುದು ಮತ್ತು ಸಮತೋಲನ ಮತ್ತು ಸ್ಥಳೀಕ ಸಂಬಂಧಿಸಿದ ದೃಷ್ಟಿಕೋನಕ್ಕೆ (ಸ್ಥಳ ಚಲನೆಯ ಸಂವೇದನೆ ಎಂದೂ ಕರೆಯಲಾಗುತ್ತದೆ) ಸಹಾಯ ಮಾಡುವ ಇತರ ಇಂತಹ ಚಲನೆಗಳಲ್ಲಿ ಮಕ್ಕಳು ಆಸಕ್ತಿ ಹೊಂದಿರುತ್ತಾರೆ. ಈ ಚಲನೆಗಳು ಮಕ್ಕಳ ಪಾಲಿಗೆ ಕುತೂಹಲಕರವಾಗಿರುತ್ತವೆ. ಅವರು ಕುತೂಹಲಕಾರಿ ಆಗಿರುವುದರಿಂದ ಹಾಗೂ ತಮ್ಮ ಸುತ್ತಲಿನ ಪ್ರಪಂಚದ ಅನ್ವೇಷಣೆ ಮಾಡಲು ಇಚ್ಛಿಸುವುದರಿಂದ ಪೀಠೋಪಕರಣಗಳು, ಕಿಟಕಿಗಳು ಇತ್ಯಾದಿ ಸಾಮಾನ್ಯ ವಸ್ತುಗಳ ಮೇಲೆ ಪ್ರಯಾಸ ಪಟ್ಟು ಹತ್ತಲು ಇಷ್ಟಪಡುತ್ತಾರೆ.

ಮೂರು ವರ್ಷದ ಮಕ್ಕಳು: ಸಾಮಾನ್ಯವಾಗಿ ಸಮಾನಾಂತರ ಆಟದಲ್ಲಿ ತೊಡಗಿಸಿಕೊಳ್ಳುತ್ತಾರೆ

ಅಂದರೆ ಅವರು ಅವರಷ್ಟಕ್ಕೇ ಆಟವಾಡುತ್ತಾರೆ. ಆದರೆ ತಮ್ಮ ಸಹಪಾಠಿಗಳು ಆಟವಾಡುವ ವಸ್ತುಗಳ ಜೊತೆಯೇ ಆಟವಾಡಿ ಅನುಕರಣೆ ಮಾಡಲು ಇಷ್ಟಪಡುತ್ತಾರೆ. ಅವರು ಸಹಜವಾಗಿ ಇತರರೊಂದಿಗೆ ಬೆರೆಯುವುದಿಲ್ಲ. ಆದರೆ ಈ ವಯಸ್ಸಿನಲ್ಲಿ ಇತರ ಮಕ್ಕಳ ಜೊತೆಗೆ ಒಡನಾಟ ಹೊಂದಲು ಪ್ರಾರಂಭಿಸುತ್ತಾರೆ. ಇದರಿಂದಾಗಿ ಸಣ್ಣಪುಟ್ಟ ಸಂಘರ್ಷಗಳು ಉಂಟಾಗಬಹುದು. ಇದನ್ನು ಹಿರಿಯರು ಬಗೆಹರಿಸಬೇಕಾಗುತ್ತದೆ.

ಮೂರು ವರ್ಷದ ಮಗು ಬೇಗನೆ ಕಾಲ್ಪನಿಕ ಆಟಕ್ಕೆ ಜಾರುತ್ತದೆ ಹಾಗೂ ಸುತ್ತಮುತ್ತಲಿನ ಪರಿಸರವನ್ನು ಗಮನಿಸಿ ಅಥವಾ ತಾವು ಕೇಳುವ ಕಥೆಯನ್ನು ಆಧರಿಸಿ ನೈಜ ಬದುಕಿನ ಸನ್ನಿವೇಶಗಳನ್ನು ರೂಪಿಸುತ್ತದೆ. ಕಿಂಡರ್‌ಗಾರ್ಟನ್‌ನ ಮಕ್ಕಳು ತಾಯಿ / ಅಜ್ಜಿಯ ಪಾತ್ರವನ್ನು ಆಡಲು ತಮ್ಮ ಸುತ್ತ ದುಪ್ಪಟ್ಟಾವನ್ನು ಹೇಗೆ ಸುತ್ತಿಕೊಳ್ಳುತ್ತಾರೆ ಮತ್ತು ಅಡುಗೆ ಕೋಣೆಯ ಕಾಲ್ಪನಿಕ ಪಾತ್ರೆಗಳೊಂದಿಗೆ ಹೇಗೆ ಅಡುಗೆ ಮಾಡುತ್ತಾರೆ ಎಂಬುದನ್ನು ನಾವು ನೋಡಿದ್ದೇವೆ. ಇದೇ ರೀತಿ, ತಾವು ಕೇಳಿದ ಕಥೆಯಲ್ಲಿ ಬರುವ ಅಚ್ಚುಮೆಚ್ಚಿನ ಪಾತ್ರವನ್ನು ಆಡಲು ಮಕ್ಕಳು ಇಷ್ಟಪಡುತ್ತಾರೆ. ಉದಾಹರಣೆಗೆ: 'ರೆಡ್ ರೈಡಿಂಗ್ ಹುಡ್' ಕಥೆಯಲ್ಲಿ ಬರುವಂತೆ ಮೇಲಂಗಿಯನ್ನು ಧರಿಸುವುದು ಮತ್ತು ಒಂದು ಬುಟ್ಟಿ ಆಹಾರವನ್ನು ಕೊಂಡೊಯ್ಯುವುದು. ಕಥೆಗಳ ಅಥವಾ ನೈಜ ಬದುಕಿನ ಚಿತ್ರಣಗಳನ್ನು ಅವರು ಚೆನ್ನಾಗಿ ಗ್ರಹಿಸಿಕೊಂಡು ಆಟದ ಮಾಧ್ಯಮದ ಮೂಲಕ ವ್ಯಕ್ತಪಡಿಸುತ್ತಾರೆ ಎಂಬುದನ್ನು ಈ ರೀತಿಯ ಆಟವು ತೋರಿಸುತ್ತದೆ.

ನಾಲ್ಕು ವರ್ಷದ ವಯಸ್ಸಿನ ಮಕ್ಕಳು: ನಟನೆಯ ಆಟ ಮತ್ತು ವಿಚಾರಗಳ ಅಭಿವ್ಯಕ್ತಿ

ನಾಲ್ಕು ವರ್ಷಗಳ ವಯಸ್ಸಿನಲ್ಲಿ ಮಗುವು ಇತರ ಮಕ್ಕಳನ್ನು ಗಮನಿಸಲು ಇಷ್ಟಪಡುತ್ತದೆ ಹಾಗೂ ಇತರರೊಂದಿಗೆ ಬೆರೆಯಲು ಪ್ರಾರಂಭಿಸುತ್ತದೆ. ಮಕ್ಕಳು ಗುಂಪಿನಲ್ಲಿ ಒಟ್ಟಿಗೆ ಆಟವಾಡುವುದನ್ನು ಆನಂದಿಸುತ್ತಾರೆ. ಇದು ಅವರಿಗೆ ಸಂಘಟಿತ ನಿರ್ಧಾರವನ್ನು ತೆಗೆದುಕೊಳ್ಳಲು ಮತ್ತು ಭಿನ್ನಾಭಿಪ್ರಾಯ ಹೇಳಲು ಅನುವು ಮಾಡಿಕೊಡುತ್ತದೆ. ಪಾತ್ರಾಭಿನಯ ಮತ್ತು ನಟನೆಯ ಆಟದ ಆರಂಭವನ್ನು ನಾವು ನೋಡಬಹುದು. ಮಕ್ಕಳು ತಮ್ಮ ಆಲೋಚನೆ ಮತ್ತು ವಿಚಾರಗಳನ್ನು ವ್ಯಕ್ತಪಡಿಸಲು ಭಾಷೆಯನ್ನು ಅಭಿವೃದ್ಧಿಪಡಿಸಲು ಪ್ರಾರಂಭಿಸುತ್ತಾರೆ. ಅವರು ಶಬ್ದಸಂಪತ್ತನ್ನು ವಿನಿಮಯ ಮಾಡಿಕೊಳ್ಳುತ್ತಾರೆ ಮತ್ತು ಸಂಕೀರ್ಣ ಭಾಷೆಯನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಾರೆ. ನಟನೆಯ ಆಟವು ಮಗುವಿಗೆ ತಾನು ನೋಡಿದ ಮತ್ತು ಅನುಭವಿಸಿದ ಏನಾದರೂ ಅಂಶವನ್ನು ವ್ಯಕ್ತಪಡಿಸಲು ಅವಕಾಶ ಮಾಡಿಕೊಡುತ್ತದೆ.

ನಮ್ಮ ಕಿಂಡರ್‌ಗಾರ್ಟನ್‌ನಲ್ಲಿ ನಾವು 'ಲೆಟ್ಸ್ ಪ್ರಿಟೆಂಡ್' ಎಂಬ ಆಟವನ್ನು ಆಡಿದೆವು. ಮಕ್ಕಳಲ್ಲಿ ಕಲ್ಪನೆಯ ಕಿಡಿಯನ್ನು ಹೊತ್ತಿಸುವುದಕ್ಕಾಗಿ ಮರದ ತುಂಡು ಪ್ರಚೋದಕ (ಪ್ರಾಂಪ್ಟ್) ಆಗಿ ಕೆಲಸ ಮಾಡಿತು. ಮರದ ತುಂಡುಗಳನ್ನು ಡ್ರಮ್, ತಬಲಾ ಹಾಗೂ ಹಾರ್ಮೋನಿಯಂ ಮುಂತಾದ ಸಂಗೀತ ಪರಿಕರಗಳಾಗಿ ಕಲ್ಪಿಸಿಕೊಂಡು ಅವರು ಬಳಸಿಕೊಂಡರು. ವೇದಿಕೆಯಲ್ಲಿ ಕಾರ್ಯಕ್ರಮವನ್ನು ನಕಲು ಮಾಡುವುದಕ್ಕಾಗಿ ಒಂದು ಮಗುವು ಮರದ ಗಿಲಕೆಯನ್ನು ಧ್ವನಿವರ್ಧಕದಂತೆ ಹಿಡಿದುಕೊಂಡಿತು. ಮಾತುಗಳ ಮೂಲಕ ವ್ಯಕ್ತಪಡಿಸಲಾಗದೇ ಇರುವುದನ್ನು ಆಟದ ಮೂಲಕ ವ್ಯಕ್ತಪಡಿಸಬಹುದು.

ಐದು ವರ್ಷ ವಯಸ್ಸಿನ ಮಕ್ಕಳು: ಪಾತ್ರಾಭಿನಯ ಮತ್ತು ಒಮ್ಮತದ ನಿರ್ಧಾರ ತೆಗೆದುಕೊಳ್ಳುವುದು

ಐದು ವರ್ಷ ವಯಸ್ಸಿನ ಮಕ್ಕಳು ತಾವು ಆಡಬೇಕಾದ ಆಟಗಳನ್ನು ಯೋಜಿಸುವಾಗ ಮತ್ತು ತಮ್ಮ ಜೊತೆ ಆಟವಾಡಬೇಕಾದ ವ್ಯಕ್ತಿಯನ್ನು ಆರಿಸುವ ವಿಚಾರದಲ್ಲಿ ಹೆಚ್ಚು ಸಮರ್ಥನೀಯ–ರಾಗಿರುತ್ತಾರೆ. ಅವರು ಹೊಸ ಗೆಳೆಯರನ್ನು ಸಂಪಾದಿಸಲು ಉತ್ಸುಕರಾಗಿರುತ್ತಾರೆ ಹಾಗೂ ಓರಗೆಯ ಗುಂಪಿನ ಜೊತೆಗೆ ಆಗಲೇ ಒಡನಾಟ ಸಾಧಿಸಿಕೊಂಡಿರಬಹುದು. ಮಕ್ಕಳು ತಂಡದೊಳಗೆ ವಿವಿಧ ಪಾತ್ರಗಳನ್ನು ವಹಿಸುತ್ತಾರೆ. ಅವರು ನಾಯಕರೂ ಆಗಬಹುದು, ಅನುಯಾಯಿಗಳೂ ಆಗಬಹುದು. ಕೆಲವರು ಶಾಂತಿ ಸಂಧಾನಕ್ಕಾಗಿ ಮಧ್ಯಸ್ಥಿಕೆಯನ್ನೂ ವಹಿಸಬಹುದು, ಉಳಿದವರು ವೈರುಧ್ಯಮಯ ಅಭಿಪ್ರಾಯಗಳನ್ನು ಕೊಡಬಹುದು. ಈ ತಂಡವು ಕಾಲ್ಪನಿಕ ಕಥಾವಸ್ತುವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಒಗ್ಗೂಡಬಹುದು ಹಾಗೂ ಪಾತ್ರಾಭಿನಯದಲ್ಲಿ ತೊಡಗಿಕೊಳ್ಳಬಹುದು. ಇದನ್ನು ನಾಟಕೀಯ ಆಟ ಅಥವಾ ಸಮಾಜೋ–ನಾಟಕೀಯ ಆಟವೆಂದು ಕರೆಯಲಾಗುತ್ತದೆ. ಇದು ಆಧುನಿಕತೆಯಿಂದ ಕೂಡಿದ್ದು, ಮಕ್ಕಳ ಆಸಕ್ತಿಗಳು ಮತ್ತು ವಿಚಾರಗಳಿಗೆ ಅನುಗುಣವಾಗಿ ನಿರಂತರವಾಗಿ ಹೊಂದಿಕೊಳ್ಳುತ್ತದೆ ಮತ್ತು ಬದಲಾವಣೆಯಾಗುತ್ತದೆ. ಇದು ತಂಡವೊಂದನ್ನು ಸೇರಿಕೊಳ್ಳುವುದು, ಹಂಚಿಕೊಳ್ಳುವುದು ಮತ್ತು ಸರದಿಯಲ್ಲಿ ನಡೆದುಕೊಳ್ಳುವುದು, ಪಾತ್ರ ವಹಿಸುವುದು ಮತ್ತು ವಿವಿಧ ಸಂಬಂಧಗಳನ್ನು ಅನ್ವೇಷಿಸುವುದು (ಪೋಷಕ/ ಮಗು, ಸಹೋದರ/ ಸಹೋದರಿ, ವೈದ್ಯರು/ರೋಗಿ) ಮತ್ತು ಮುಂದೆ ಏನು ಮಾಡಬೇಕು ಎನ್ನುವ ಕುರಿತು ಪರಸ್ಪರ ಚರ್ಚೆ ನಡೆಸುವುದು ಮುಂತಾದ ಕೌಶಲಗಳಿಗೆ ಅನುವು ಮಾಡಿ ಕೊಡುತ್ತದೆ.

ಬದಲಾವಣೆ ಮತ್ತು ಬೆಳವಣಿಗೆಯ ಹೊಸ್ತಿಲಲ್ಲಿ ಇರುವ ಆರು ವರ್ಷ ವಯಸ್ಸಿನ ಮಕ್ಕಳು

ಆರು ವರ್ಷ ವಯಸ್ಸಿನಲ್ಲಿ ಮಕ್ಕಳು ತರಗತಿಯ ಸವಾಲುಗಳನ್ನು ಸ್ವೀಕರಿಸಲು ಸಿದ್ಧರಾಗಿರುತ್ತಾರೆ. ಅವರ ಆಟವು ವಿಶೇಷವಾಗಿ ಹೆಚ್ಚು ಪ್ರಾಯೋಗಿಕ ಮತ್ತು ಯೋಚನೆ ಆಧಾರಿತ ವಿಷಯವಸ್ತುವನ್ನು ಒಳಗೊಂಡಿರುತ್ತದೆ. ಆರು ವರ್ಷ ವಯಸ್ಸಿನ ಮಕ್ಕಳು ಈ ಬೆಳವಣಿಗೆಯ ಹಂತವನ್ನು ಕಿಂಡರ್‌ಗಾರ್ಟನ್‌ನಲ್ಲಿಯೇ ಪೂರ್ಣಗೊಳಿಸಿದರೆ (ಅವರು ಪ್ರಪಂಚವನ್ನು ಎದುರಿಸಲು ಸಿದ್ಧರಿದ್ದರೂ) ಒಳ್ಳೆಯದು. ಈ ಹಂತದಲ್ಲಿ, ಶಾಲೆಯ ಆಟದ ಸಮಯದಲ್ಲಿ ತಮಗೆ ಬೋರು ಹೊಡೆಯುತ್ತದೆ ಎಂದು ಮಕ್ಕಳು ಮನೆಯಲ್ಲಿ ಹೇಳಲೂಬಹುದು. ಹೀಗೆಂದರೆ ಕಿಂಡರ್‌ಗಾರ್ಟನ್‌ಗಳು ಮಕ್ಕಳ ಅಗತ್ಯತೆಗಳನ್ನು ಪೂರೈಸುತ್ತಿಲ್ಲ ಅಥವಾ ಅವರಿಗೆ ಇನ್ನಷ್ಟು ಸವಾಲುಗಳನ್ನು ಮುಂದಿಡುವುದಕ್ಕಾಗಿ ಹಾಗೂ ಉತ್ತೇಜಿಸುವು-ದಕ್ಕಾಗಿ ಹೆಚ್ಚು ರಾಚನಿಕ ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮ ಮಕ್ಕಳನ್ನು ತೊಡಗಿಸುವ ಅಗತ್ಯವಿದೆ ಎಂದು ಹೆಚ್ಚಿನ ಪೋಷಕರು ಭಾವಿಸಬಹುದು. ಆದರೆ ಈ ರೀತಿ ಮಗುವನ್ನು ವಿಪರೀತ ಚಟುವಟಿಕೆಗಳಲ್ಲಿ ತೊಡಗಿಸುವ ಮೂಲಕ ಮತ್ತು ಅದು ಮುಂದಿನ ಹಂತಕ್ಕೆ ಹೋಗಲು ನಿಜವಾಗಿಯೂ ಸಿದ್ಧಗೊಳ್ಳುವ ಮೊದಲೇ ಅದನ್ನು ಆ ಹಂತಕ್ಕೆ ತಳ್ಳುವ ಮೂಲಕ ಬೆಳವಣಿಗೆಯ ಈ ಹಂತವನ್ನು ಮುಗಿಸುವ ಮಗುವಿನ ಸಾಮರ್ಥ್ಯಕ್ಕೆ ಅಡ್ಡಿಪಡಿಸಿದಂತಾಗುತ್ತದೆ. ಈ ಹಂತದಲ್ಲಿ ಮಗುವು ಹೊಸ ಆಂತರಿಕ ಸಾಮರ್ಥ್ಯವನ್ನು ಎದುರಿಸುತ್ತದೆ ಮತ್ತು ಇದರ ಮೇಲೆ ಹೇಗೆ ಹಿಡಿತ ಸಾಧಿಸಬೇಕು ಎಂಬುದು ಇದಕ್ಕೆ ಸ್ಪಷ್ಟವಾಗಿ ತಿಳಿದಿರುವುದಿಲ್ಲ. ಈ ವಯಸ್ಸಿನಲ್ಲಿ ನೆಲ ಗುಡಿಸುವುದು, ತೋಟದ ಕೆಲಸ, ಸರಳವಾದ ಹೊಲಿಗೆ, ಬಟ್ಟೆ ಮಡಚುವುದು, ಅಡುಗೆ, ತೊಳೆಯುವುದು ಮತ್ತು ಧೂಳು ತೆಗೆಯುವುದು ಮುಂತಾದ ಹೆಚ್ಚು ಪ್ರಾಯೋಗಿಕ ಕೆಲಸಗಳನ್ನು ಕಿಂಡರ್‌ಗಾರ್ಟನ್ ಹಾಗೂ ಮನೆ ಹೀಗೆ ಎರಡೂ ಕಡೆಗಳಲ್ಲಿ ನೀಡಬಹುದು. ಈ ಮೂಲಕ ಅನಿಶ್ಚಿತತೆಯ ಸಮಯದಲ್ಲಿ ಕಾರ್ಯ ನಿರ್ವಹಿಸಲು ಮತ್ತು ಇನ್ನೊಮ್ಮೆ ಆಟವಾಡಲು ಮತ್ತು ಹೊಸ ದೃಷ್ಟಿಕೋನದೊಂದಿಗೆ ಕೆಲಸ ಮಾಡಲು ಅವರಿಗೆ ಸಾಧ್ಯವಾಗುತ್ತದೆ.

ಸಾಂಪ್ರದಾಯಿಕ ಶಾಲೆಯಿಂದ ಬಂದ ಮಕ್ಕಳಿಗೆ ಆಟವು ಸಹಾಯ ಮಾಡುತ್ತದೆಯೇ?

ಆರುಶ್*, ಅತ್ಯಂತ ಜನಪ್ರಿಯ ಪ್ರಿಸ್ಕೂಲ್ ಒಂದರಲ್ಲಿ ಒಂದೆರಡು ವರ್ಷ ಕಳೆದ ನಂತರ ಐದನೇ ವಯಸ್ಸಿನಲ್ಲಿ ನಮ್ಮ ಕಿಂಡರ್-ಗಾರ್ಟನ್ ಅನ್ನು ಸೇರಿದ. ಆರಂಭದಲ್ಲಿ ರಚನಾಕ್ರಮವಿಲ್ಲದ ವಸ್ತುಗಳೊಂದಿಗೆ ಆಟವಾಡಲು ಅವನಿಗೆ ಕಷ್ಟವೆನಿಸಿತು ಹಾಗೂ ವಾಲ್ಡೋರ್ಫ್ ತತ್ವದೊಂದಿಗೆ ಹೊಂದಿಕೊಳ್ಳಲು ದೀರ್ಘ ಸಮಯ ಹಿಡಿಯಿತು. ಆಟವಾಡಲು ಅಥವಾ ಯಾವುದೇ ಚಟುವಟಿಕೆಯನ್ನು ಕೈಗೊಳ್ಳಲು ಮಾರ್ಗದರ್ಶನ ಮತ್ತು ಸೂಚನೆ ಪಡೆಯುವುದಕ್ಕಾಗಿ ಆತ ನಿರಂತರವಾಗಿ ಶಿಕ್ಷಕರ ಮೊರೆ ಹೋಗುತ್ತಿದ್ದ. ತಾನಾಗಿಯೇ ಆತ ಯಾವುದಕ್ಕೂ ಕೈ ಹಾಕುತ್ತಿರಲಿಲ್ಲ. ಮನೆಗೆ ಹೋದ ನಂತರ, ಶಾಲೆಯಲ್ಲಿ ಬೋರು ಹೊಡೆಯುತ್ತದೆ ಎಂದು ದೂರುತ್ತಿದ್ದ. ಈ ಹಿಂದೆಯೇ ತಿಳಿಸಿದಂತೆ, ಐದನೇ ವಯಸ್ಸಿನಲ್ಲಿ, ಮಗುವು ಸಂತಸ ಮತ್ತು ಆತ್ಮವಿಶ್ವಾಸದಿಂದ ಕೂಡಿದ ಹುಡುಗನಾಗಿ ಬೆಳೆಯುತ್ತದೆ ಹಾಗೂ ಮೊದಲೇ ರೂಪಿಸಿದ ವಿಚಾರಗಳನ್ನು ಆಧರಿಸಿ ಆಟವನ್ನು ಮುನ್ನಡೆಸಬಲ್ಲದು. ಆದರೆ ಈ ಮಗುವಿನ ಪರಿವರ್ತನೆಯು ತುಂಬಾ ನಿಧಾನವಾಗಿ ನಡೆದ ಕಾರಣ ಇದು ಇನ್ನೂ ಆ ಹಂತದಲ್ಲಿರಲಿಲ್ಲ. ಒಂದಷ್ಟು ಪ್ರಯತ್ನದ ಮೂಲಕ ಶೈಕ್ಷಣಿಕ ವರ್ಷದ ಕೊನೆಯ ಹೊತ್ತಿಗೆ ಪರಿಸ್ಥಿತಿಯನ್ನು ಬದಲಾಯಿಸಲು ನಮಗೆ ಸಾಧ್ಯವಾಯಿತು.

ಎಳೆಯ ಮಗುವಿನ ವಿಚಾರದಲ್ಲಿ ಪರಿವರ್ತನೆಯು ಭಿನ್ನವಾಗಿರುತ್ತದೆ. ಏಕೆಂದರೆ ಸಾಂಪ್ರದಾಯಿಕ ಶಿಕ್ಷಣವು, ಆಟಕ್ಕೆ ಅತ್ಯಲ್ಪ ಅವಕಾಶ ನೀಡುವ ಅಥವಾ ಅವಕಾಶವೇ ನೀಡದ ಕಠಿಣ ಮತ್ತು ನಿರ್ಬಂಧಿತ ಪಠ್ಯಕ್ರಮಕ್ಕೆ ಅಂಟಿಕೊಂಡಿರುತ್ತದೆ. ಆಟವು ಬಹುತೇಕ ಅಲ್ಪಾವಧಿಗೆ ಸೀಮಿತವಾಗಿರುತ್ತದೆ ಹಾಗೂ ಇದನ್ನು ಶಿಕ್ಷಕರೇ ರೂಪಿಸುತ್ತಾರೆ ಹಾಗೂ ನಿರ್ದೇಶಿಸುತ್ತಾರೆ. ಇದನ್ನು ಹೆಚ್ಚಿನದಾಗಿ ಕೆಲಸಕ್ಕೆ ವಿರುದ್ಧವಾದುದು ಎಂದು ಪರಿಗಣಿಸಲಾಗುತ್ತದೆ. ಆದರೆ ವಾಸ್ತವವಾಗಿ ಆಟವನ್ನು, ವಿಫಲತೆಯ ಭೀತಿಗೆ ಹೆದರದೆಯೇ ಅಪಾಯಕ್ಕೆ ಮೈಯೊಡ್ಡಲು ಮಕ್ಕಳಿಗೆ ಇರುವ ಪ್ರಮುಖ ಅವಕಾಶವೆಂದು ಪರಿಗಣಿಸಲಾಗುತ್ತದೆ. ಈ ಅವಕಾಶವನ್ನು ಮುಖ್ಯವಾಹಿನಿಯ ತರಗತಿಯಲ್ಲಿ ನೀಡಲಾಗುವುದಿಲ್ಲ. ಇಲ್ಲಿ ಸೃಜನಶೀಲತೆಯತ್ತ ಚಲನೆ ಮತ್ತು ಮಾಡಲಾದ ತಪ್ಪುಗಳನ್ನು ಗೌರವಿಸಲಾಗುವುದಿಲ್ಲ. ಬದಲಾಗಿ ಮಗುವಿಗೆ ಛೀಮಾರಿ ಹಾಕಿ ಶಿಕ್ಷಿಸಲಾಗುತ್ತದೆ.

ಸಂಕ್ಷಿಪ್ತವಾಗಿ...

ವಾಲ್ಡೋರ್ಫ್ ಚೌಕಟ್ಟನ್ನು ಅನುಸರಿಸುವ ವಿವಿಧ ಸಂಸ್ಥೆಗಳಲ್ಲಿ ಮಕ್ಕಳು, ಕುಟುಂಬಗಳು ಮತ್ತು ಶಿಕ್ಷಕರ ಜೊತೆಗೆ ಕೆಲಸ ಮಾಡಿ ನಾನು ಒಂದು ಪ್ರಮುಖ ಸಾಮ್ಯತೆಯನ್ನು ನೋಡಿದ್ದೇನೆ: ಸೃಜನಶೀಲ ಆಟವು ಆರೋಗ್ಯಯುತ ಎಳೆಯ ಮಕ್ಕಳ ಬದುಕಿನಲ್ಲಿ ಪ್ರಧಾನ ಚಟುವಟಿಕೆ ಎನಿಸುತ್ತದೆ. ಮಕ್ಕಳು ತಮ್ಮ ಬದುಕಿನ ಎಲ್ಲ ಅಂಶಗಳನ್ನು ಅನುಭವಿಸಿದಂತೆಯೇ, ಇದು ಅವುಗಳನ್ನು ಒಟ್ಟಿಗೆ ಹೆಣೆಯಲು ಸಹಾಯ ಮಾಡುತ್ತದೆ. ಇದು ಅವರಿಗೆ ಬದುಕನ್ನು ಜೀರ್ಣಿಸಿಕೊಳ್ಳಲು ಮತ್ತು ತಮ್ಮದೇ ಬದುಕನ್ನು ರೂಪಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಅದು ಅವರ ಸೃಜನಶೀಲತೆಯ ಸಂಪೂರ್ಣ ಅಭಿವ್ಯಕ್ತಿಗೆ ಇರುವ ಮಾರ್ಗವಾಗಿದೆ ಹಾಗೂ ನಿಜವಾಗಿಯೂ ಅವರ ಬಾಲ್ಯದ ನಿರ್ಣಾಯಕ ಅಂಗವೆನಿಸಿದೆ. ಸೃಜನಶೀಲ ಆಟದ ಮೂಲಕ ಮಕ್ಕಳು ಅರಳುತ್ತಾರೆ ಹಾಗೂ ವಿಕಸನಗೊಳ್ಳುತ್ತಾರೆ. ಇಲ್ಲದಿದ್ದರೆ ಕಲಿಯಲು ಮತ್ತು ಸಮಗ್ರ ಅಭಿವೃದ್ಧಿ ಸಾಧಿಸಲು ಹೆಣಗಾಡುತ್ತಾರೆ.

ಆಟ ಮತ್ತು ಆರಂಭಿಕ ಶಿಕ್ಷಣದ ಕುರಿತು ಪೋಷಕರು ಮತ್ತು ಆರಂಭಿಕ ಬಾಲ್ಯಾವಸ್ಥೆಯ ಬೋಧಕರಿಗೆ ನಾನು ನೀಡುವ ಏಕಮಾತ್ರ ಸಲಹೆ ಒಂದೇ: ಆರಾಮವಾಗಿರಿ ಮತ್ತು ಮಕ್ಕಳಿಗೆ ಅವಸರ ಮಾಡಬೇಡಿ. ಮಕ್ಕಳಲ್ಲಿ ಬೆಳವಣಿಗೆ ಮತ್ತು ಕಲಿಕೆಯ ಎಷ್ಟು ಸಾಮರ್ಥ್ಯವಿದೆ ಎಂದರೆ, ಎಚ್ಚರಿಕೆಯ ಪೋಷಣೆ ಮತ್ತು ಸಮಗ್ರ ನೆರವು ನೀಡಿದರೆ ಹೆಚ್ಚಿನವರು ಅದ್ಭುತವಾಗಿ ಯಶಸ್ಸು ಸಾಧಿಸುತ್ತಾರೆ. ಆದರೆ ಮುಖ್ಯವಾಗಿ ಭಾರತದಲ್ಲಿ, ಉರು ಹೊಡೆದು ಕಲಿಯುವ ಬದಲಿಗೆ ಅನುಭವವನ್ನು ಗಳಿಸುವುದು ಮತ್ತು ಅರ್ಥ ಮಾಡಿಕೊಳ್ಳುವುದು ಅತ್ಯಗತ್ಯವಾಗಿರುವ ಹಂತದಲ್ಲಿ, ಮಕ್ಕಳು ಸಿದ್ಧರಾಗುವ ಮೊದಲೇ ಪೋಷಕರು ಫಲಿತಾಂಶಕ್ಕಾಗಿ ಒತ್ತಡ ಹೇರುವಾಗ ಹಾಗೂ ತೀರಾ ಆರಂಭಿಕ ಹಂತದಲ್ಲಿಯೇ ತಂತ್ರಜ್ಞಾನವನ್ನು ಬಳಸುವಾಗ ಈ ಸಂದೇಶವನ್ನು ತಲುಪಿಸುವುದು ಕಷ್ಟದ ಕೆಲಸ.

ಮಾನವನಾಗಿ ರೂಪುಗೊಳ್ಳುವ ಪ್ರಕ್ರಿಯೆಯಲ್ಲಿ ಇರಬೇಕಾದ ಪ್ರಮುಖ ಗುಣಸ್ವಭಾವವೇನೆಂದರೆ, ಮಕ್ಕಳಿಗೆ ಬೆಳೆಯಲು ಮತ್ತು ಮಾನವ ಸ್ವಭಾವದ ಅಂಗವೆನಿಸಿರುವ ಎಲ್ಲ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ದೀರ್ಘ ಸಮಯ ಬೇಕಾಗುತ್ತದೆ. ಇತರ ಎಳೆಯ ಸಸ್ತನಿಗಳಿಗೆ ಹೋಲಿಸಿದರೆ ಮಾನವ ಮಗುವಿಗೆ ಪಕ್ವತೆಗೆ ತಲುಪಲು ಹೆಚ್ಚಿನ ಸಮಯ ಬೇಕಾಗುತ್ತದೆ. ನಮ್ಮ ಮಕ್ಕಳಿಗೆ ನಿಧಾನ ಮತ್ತು ಸ್ಥಿರವಾದ ಗತಿಯಲ್ಲಿ ಬೆಳೆಯಲು ಮತ್ತು ಅಭಿವೃದ್ಧಿ ಹೊಂದಲು ಎಲ್ಲ ಅಧಿಕಾರವಿದೆ. ಮಕ್ಕಳಿಗೆ ಆಟವಾಡಲು ಸಮಯ ನೀಡುವ ಮೂಲಕ ಮತ್ತು ತಮ್ಮದೇ ಆದ ಗತಿಯಲ್ಲಿ ಈ ಪ್ರಪಂಚವನ್ನು ಅನುಭವಿಸಲು ಅವಕಾಶ ಒದಗಿಸುವ ಮೂಲಕ ಇದನ್ನು ಸಾಧಿಸಬಹುದು.

*ಮಕ್ಕಳ ಗುರುತನ್ನು ಮರೆಮಾಚುವ ಉದ್ದೇಶದಿಂದ ಹೆಸರುಗಳನ್ನು ಬದಲಾಯಿಸಲಾಗಿದೆ

ಪರಾಮರ್ಶನ

i Crisis in the Kindergarten - Why Children Need to Play in School by Edward Miller and Joan Almon

ii https://www.sunbridge.edu/about/waldorf-education/

iii https://www.sagepub.com/sites/default/files/upm-binaries/53567_ch_10.pdf



ದಿವ್ಯಾ ಬಿ.ಎ. ಅವರು ವಾಲ್ಡೊರ್ಫ್ ಶಿಕ್ಷಣ ವಿಧಾನದಲ್ಲಿ ಪರಿಣತಿ ಪಡೆದಿರುವ ಆರಂಭಿಕ ಬಾಲ್ಯಾವಸ್ಥೆಯ ವಿಷಯದ ಶಿಕ್ಷಕಿಯಾಗಿದ್ದಾರೆ. ಅವರು ಆಯ್ದು ಭಾರತೀಯ ಕಥೆ ಪುಸ್ತಕಗಳು, ಮುಕ್ತ ಮತ್ತು ಎಲ್ಲೆ ಇರದ ಆಟಿಕೆಗಳು, ಮಕ್ಕಳ ಸಾಂಪ್ರದಾಯಿಕ ಕರಕುಶಲ ವಸ್ತುಗಳು ಮುಂತಾದುವುಗಳನ್ನು ಮಾರುವ ಆನ್‌ಲೈನ್ ಅಂಗಡಿ 'ಮೈ ಲಿಟಲ್ ಬುಕ್‌ಶಾಪ್'ನ ಸಂಸ್ಥಾಪಕಿಯೂ ಆಗಿದ್ದಾರೆ. ವಿವಿಧ ವಾಲ್ಡೊರ್ಫ್ ಪರಿಸರಗಳಲ್ಲಿ ಶಿಕ್ಷಕಿ, ಮಾರ್ಗದರ್ಶಕಿ, ಪೋಷಕರ ತರಬೇತುಗಾರ್ತಿಯಾಗಿ ಕೆಲಸ ಮಾಡಿರುವ ದಿವ್ಯಾ ಅವರು ತುಳಸಿ ವಾಲ್ಡೊರ್ಫ್ ಕಿಂಡರ್‌ಗಾರ್ಟನ್ ಅನ್ನು 2018ರಲ್ಲಿ ಸ್ಥಾಪಿಸಿದರು. ಸ್ಟೈನರ್ ಅವರು ಸಲಹೆ ನೀಡಿರುವಂತೆ, ಇಲ್ಲಿ ಅವರು ಸ್ಥಳೀಯ ಹಬ್ಬಗಳು, ಆಹಾರ ಮತ್ತು ಭಾಷೆಯನ್ನು ಮಕ್ಕಳ ದಿನನಿತ್ಯದ ಅನುಭವದೊಂದಿಗೆ ಜೋಡಿಸಲು ಒತ್ತು ನೀಡುತ್ತಿದ್ದಾರೆ. ಕೋವಿಡ್ – 19 ಸಾಂಕ್ರಾಮಿಕದ ಅವಧಿಯಲ್ಲಿ ಅವರು ಪೋಷಕರಿಗಾಗಿ 'ಸ್ಲೋ ಡೌನ್ ಮಾಮಾ' ಎನ್ನುವ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಿದ್ದು, ವಾಲ್ಡೊರ್ಫ್ ತತ್ವಗಳನ್ನು ಪೋಷಕರು ಮನೆಯಲ್ಲಿಯೇ ಪಾಲಿಸಲು ಅವರು ಮಾರ್ಗದರ್ಶನ ನೀಡುತ್ತಿದ್ದಾರೆ. ಅವರನ್ನು divya.ba02@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಮೆಲ್ವಿನ್ ಮೆಂಡೊನ್ಸಾ** । ಪರಿಶೀಲನೆ: **ನಾಗಮಣಿ ಎಸ್. ಎನ್.**